ಶ್ರೀ ಪಿ. ಜಿ. ಆರ್ ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ನಿರ್ದಿಷ್ಟವಾಗಿ ಇಂತಿಷ್ಟೆ ದಿವಸಗಳಲ್ಲಿ ನಾನು ಈ ಕೆಲಸವನ್ನು ಮಾಡುತ್ತೇನೆಂದು ಹೇಳುವುದು ಕಷ್ಟವಾಗುತ್ತದೆ. ಬೆಂಗಳೂರು ನಗರ ಸಾರಿಗೆ ವಿಭಾಗದಲ್ಲಿ ಇರಬಹುದಾದ ಕೆಲವು ತೊಂದರೆಗಳನ್ನು ನಿವಾರಿಸಲು ನಮಗೆ ಬಂದಿರತಕ್ಕ ಕಷ್ಟ ಎಂದರೆ ಪ್ರತಿಯೊಬ್ಬರೂ ಕೂಡ ಎಲ್ಲಾ ಬಸ್ಸುಗಳನ್ನೂ ಶಿವಾಜಿನಗರ, ಸಿಟಿ ಮಾರ್ಕೆಟ್, ಬೆಂಗಳೂರು ಬಸ್ ಸ್ಟ್ಯಾಂಡ್‌ಗೆ ಪೀಕ್ ಅವರ್‌ನಲ್ಲಿ ಓಡಿಸಬೇಕೆಂದು ಕೇಳಂತ್ತಿದ್ದಾರೆ. ಆದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸುವುದು ಬಹಳ ಕಷ್ಟವಾಗುತ್ತದೆ. ಆದಷ್ಟು ಬೇಗ ಈ ಸಮಸ್ಯೆಯನ್ನು ಬಗೆಹರಿಸಬೇಕೆಂಬುದು ನನ್ನ ಅಪೇಕ್ಷೆ. ಈ ದಿಸೆಯಲ್ಲಿ ನಾನು ಹೆಚ್ಚಿನ ಪ್ರಯತ್ನ ಮಾಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಎ. ಕೃಷ್ಣಪ್ಪ —ಸಾರ್ವಜನಿಕರಿಗೆ ಬಸ್ ಸೌಕರ್ಯವನ್ನು ಕಲ್ಪಿಸಿಕೊಡಬೇಕಾದರೆ ಒಂದು ಯೋಜನೆ ಇಟ್ಟುಕೊಂಡು ಕೊಡಲಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಅಂಥ ಒಂದು ಯೋಜನೆಯನ್ನು ನೀವು ಏನಾದರೂ ಇಟ್ಟುಕೊಂಡಿದ್ದೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಬೆಂಗಳೂರು ನಗರ ಸಾರಿಗೆ ಸಂಸ್ಥೆಗೆ ೧೫೦ ಬಸ್ಸುಗಳನ್ನು ಹೊಸದಾಗಿ ಸೇರಿಸುತ್ತಿದ್ದೇವೆ. ಪ್ರತಿ ವಾರದಲ್ಲೂ ೪-೫ ಬಸ್ಸುಗಳನ್ನು ಸೇರಿಸುತ್ತಿದ್ದೇವೆ. ಎಲ್ಲ ಬಸ್ಸುಗಳೂ ಬಂದಾಗ ನಾವು ಜನರಿಗೆ ಹೆಚ್ಚು ಸಂಚಾರ ಸೌಕರ್ಯವನ್ನು ಕಲ್ಪಿಸಿಕೊಡುವ ವ್ಯವಸ್ಥೆ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಮಂಗಳೂರು ನಗರದಲ್ಲಿರುವ ಸಂಚಾರ ನಿಯಂತ್ರಣ ಆರಕ್ಷಕರು

೪೧೧. ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮಂಗಳೂರು).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ನಗರದಲ್ಲಿ ವಾಹನ ನಿಯಂತ್ರಣ ಪೊಲೀಸ್ ದಳದ ತೀವ್ರ ಕೊರತೆ ಇದ್ದು ಇದರಿಂದ ಸಂಚಾರ ವ್ಯವಸ್ಥೆಯೇ ಅಪಾಯಕ್ಕೆ ಸಿಲುಕಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸದರಿ ನಗರದಲ್ಲಿ ಈಗ ಇರುವ ವಾಹನ ನಿಯಂತ್ರಣ ಸಂಚಾರಿ ಪೊಲೀಸ್ ದಳದ ಸಂಖ್ಯೆ ಎಷ್ಟು ?

ಇ) ನಿಯಮಾನುಸಾರ ಅಲ್ಲಿ ಇರಬೇಕಾಗಿರುವವರ ಸಂಖ್ಯೆ ಎಷ್ಟು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ) ಈಗ ಮಂಗಳೂರು ನಗರದಲ್ಲಿ ಸುಮಾರು ೫೮,೦೦೦ ದ್ವಿಚಕ್ರ ಹಾಗೂ ಇತರೆ ವಾಹನಗಳಿದ್ದು, ಇಲ್ಲಿನ ರಸ್ತೆಗಳು ಚಿಕ್ಕದಾಗಿದ್ದು ವಾಹನ ಸಂಚಾರಕ್ಕೆ ಅಡಚಣೆಯಾಗಿದೆ.

ಆ) ಈಗ ಎರಡು ಟ್ರಾಫಿಕ್ ಪೊಲೀಸ್ ಠಾಣೆಗಳಿವೆ ಒಟ್ಟಿನ ಸಿಬ್ಬಂದಿಯ ಸಂಖ್ಯೆ ಈ ರೀತಿ ಇದೆ.—

೧	ಪೋಲೀಸ್ ಸಬ್ ಇನ್ಸ್‌ಪೆಕ್ಟರ್	...	೨
೨	ಸಹಾಯಕ ಸಬ್ ಇನ್ಸ್‌ಪೆಕ್ಟರ್	...	೪
೩	ಹೆಡ್‌ಕಾನ್ ಟೇಬಲ್	...	೬
೪	ಪೊಲೀಸ್ ಕಾನ್ಸ್‌ಟೇಬಲ್	...	೭೬

ಇ) ಸಿಬ್ಬಂದಿ ಸಂಖ್ಯೆಯನ್ನು ನಿಯಮಗಳಲ್ಲಿ ನಿಗದಿಪಡಿಸಿಲ್ಲ.

ಮಾನ್ಯ ಅಧ್ಯಕ್ಷರೇ, ಒಂದೇಸಾರಿ ಅವರು ಕೇಳಬಹುದಾದ ಸಪ್ಲಿಮೆಂಟರಿಗೂ ಉತ್ತರವನ್ನು ಹೇಳಿಬಿಡುತ್ತೇನೆ. ಮೊದಲನೆಯದಾಗಿ, ಎಸ್. ಪಿ. ಯವರೂ ಕೆಲವು ಬೇಡಿಕೆಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದರಲ್ಲಿ ಏನು ಕೇಳಿದ್ದಾರೆಂದರೆ, ಸಿಬ್ಬಂದಿವರ್ಗವನ್ನು ಜಾಸ್ತಿ ಮಾಡಬೇಕು, ಪಿಕಪ್ ವ್ಯಾನ್ಸ್‌ಗಳು ಬೇಕು, ಮೋಟಾರು ಸೈಕಲ್‌ಗಳು ಬೇಕು, ವೈರ್‌ಲೆಸ್ ಸೆಟ್‌ಗಳು ಬೇಕೆಂದು ಕೇಳಿದ್ದಾರೆ. ಇದ್

ಸರ್ಕಾರದ ಪರಿಶೀಲನೆಯಲ್ಲಿದೆ. ಇದರಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನೂ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ.—ಅವರು ಗೃಹರಕ್ಷಕ ಸಿಬ್ಬಂದಿ ವರ್ಗವನ್ನು ನೀವು ಯಾವಾಗ ಫಿಲಪ್ ಮಾಡುತ್ತೀರಿ ? ಎಷ್ಟು ಸಬ್ ಇನ್‌ಪೆಕ್ಟರುಗಳು, ಎಷ್ಟು ಹೆಚ್.ಸಿ.ಗಳು ಎಷ್ಟು ಪಿ.ಸಿ.ಗಳು ಬೇಕೆಂದು ಪ್ರೊಪೋಸಲ್‌ನ್ನು ಕಳುಹಿಸಿದ್ದಾರೆಂಬುದನ್ನು ತಿಳಿಸುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಅಲ್ಲಿನ ಎಸ್.ಪಿ.ಯವರು ಅಡಿಷನಲ್ ಆಗಿ ಪೋಲಿಸ್ ಸಬ್ ಇನ್‌ಪೆಕ್ಟರ್‌ಗಳು–೨, ಎ. ಎಸ್. ಐ. ಗಳು–೪, ಹೆಡ್ ಕಾನ್‌ಸ್ಟೇಬಲ್‌ಗಳು–೧೪, ಪೋಲಿಸ್ ಕಾನ್‌ಸ್ಟೇಬಲ್‌ಗಳು–೩೪ ಬೇಕೆಂದು ಕೇಳಿದ್ದಾರೆ. ಮಂಗಳೂರಿನ ಪೂರ್ವ ಮತ್ತು ಪಶ್ಚಿಮ ಸಂಚಾರಿ ಪೋಲಿಸ್ ಸ್ಟೇಷನ್ ಎಂದು ೨ ಸ್ಟೇಷನ್‌ಗಳಿವೆ. ಪೂರ್ವ ಸಂಚಾರಿ ಪೋಲಿಸ್ ಸ್ಟೇಷನ್‌ಗೆ ೨ ಎಸ್. ಐ. ಗಳು, ೧೦ ಹೆಡ್ ಕಾನ್‌ಸ್ಟೇಬಲ್‌ಗಳು, ೨೭ ಪೋಲಿಸ್ ಕಾನ್‌ಸ್ಟೇಬಲ್‌ಗಳನ್ನು ಕೊಡುತ್ತಿದ್ದೇವೆ. ಇನ್ನು ಪಶ್ಚಿಮ ಸಂಚಾರಿ ಪೋಲಿಸ್ ಸ್ಟೇಷನ್‌ಗೆ ಏನು ಸಿಬ್ಬಂದಿಯನ್ನು ಕೊಡಬೇಕೋ ಅದನ್ನು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಪೂರೈಸುತ್ತೇವೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ.—ಮಾನ್ಯ ಅಧ್ಯಕ್ಷರೇ. ಹೋದ ಸಲ ಇದೇರೀತಿಯಾಗಿ ಪ್ರಶ್ನೆಯನ್ನು ಕೇಳಿದೆ. ಅದಕ್ಕೆ ರಿಪ್ಲೈ ಬಂದಿದ್ದು ಏನೆಂದರೆ, ಸಂಚಾರಿ ಪೋಲಿಸ್ ಸಿಬ್ಬಂದಿಯನ್ನು ಹೆಚ್ಚಿಸುವ ಸಲುವಾಗಿ ಕ್ರಮ ಕೈಗೊಳ್ಳುವುದಾಗಿ ಹೋದ ವರ್ಷವೇ ಪ್ರಪೋಸಲ್ ಬಂದಿದೆ ಎಂದು ಹೇಳಿದರು. ಅದಾಗಿ ವರ್ಷವಾಗುತ್ತಾ ಬಂದಿದೆ. ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ವಿಧಾನ ಸೌಧದ ಸುತ್ತಲೂ ಇರುವ ಹತ್ತನೇ ಒಂದು ಭಾಗದಷ್ಟು ಪೋಲಿಸ್ ಸಿಬ್ಬಂದಿಯನ್ನು ಮಂಗಳೂರಿಗೆ ಕಳುಹಿಸಿದರೆ ಸಾಕಾಗುತ್ತದೆ. ಮಂಗಳೂರಿನಲ್ಲಿ ಯಾವ ರೀತಿಯಾದ ಪೊಲೀಸ್ ಸಿಬ್ಬಂದಿಯೂ ಇಲ್ಲ. ಮಾನ್ಯ ಅಧ್ಯಕ್ಷರೇ, ತಮ್ಮ ಮುಂಖಾಂತರ ಮಾನ್ಯ ಸಚಿವರಿಗೆ ಹೇಳುತ್ತೇನೆ, ಆದಷ್ಟು ಜಾಗ್ರತೆಯಾಗಿ ಪೋಲಿಸ್ ಸಿಬ್ಬಂದಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಎಂದು. ಏತಕ್ಕೆಂದರೆ ಅಲ್ಲಿ ಬಹಳ ವಾಗಿ ಆಕ್ಸಿಡೆಂಟ್‌ಗಳು ಆಗುತ್ತಿವೆ. ಬಹಳ ಡಿಫಿಕಲ್ಟಿಯಿದೆ. ಆದ್ದರಿಂದ ಪೋಲಿಸ್ ಸಿಬ್ಬಂದಿಯನ್ನು ಭರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ ಮಂಗಳೂರಿನಲ್ಲಿ ಅಷ್ಟೇ ಅಲ್ಲ, ಬೆಂಗಳೂರಿನಲ್ಲಿಯೂ ಅದೇ ಪರಿಸ್ಥಿತಿ ಇದೆ. ವಿಧಾನಸೌಧ ಸುತ್ತಮುತ್ತಲೂ ಇರತಕ್ಕಂಥವರನ್ನು ಕಳುಹಿಸಲು ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ ಮಾನ್ಯ ಸದಸ್ಯರಿಗೆ ರಕ್ಷಣೆಗೆ ಇರಬೇಕು. ಅದಕ್ಕೋಸ್ಕರವೇ ವಿಧಾನ ಸೌಧ ಸುತ್ತಮುತ್ತಲೂ ಪೋಲಿಸ್ ಸಿಬ್ಬಂದಿಯನ್ನು ಇಟ್ಟಿದ್ದೇವೆ.

ಶ್ರೀ ಯು. ಭೂಪತಿ.—ನಮಗೆ ಯಾರಿಗೂ ರಕ್ಷಣೆ ಬೇಕಾಗಿಲ್ಲ.

ಭ್ರಷ್ಟ ಅಧಿಕಾರಿಗಳ ಮತ್ತು ನೌಕರರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ

೧೫೫೫. ಶ್ರೀ ಆರ್. ರೋಷನ್ ಬೇಗ್ (ಶಿವಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಧಿಕಾರಿಗಳು ಮತ್ತು ನೌಕರರ ಮನೆಗಳ ಮೇಲೆ ೧೯೮೫ ಮತ್ತು ನಂತರದಲ್ಲಿ ಲೋಕಾಯುಕ್ತರು ನಡೆಸಿದ ದಾಳಿಗಳ ಸಂಖ್ಯೆ ಮತ್ತು ಅಂತಹ ಅಧಿಕಾರಿಗಳ ನೌಕರರ ಆಸ್ತಿಯ ವಿವರಗಳು ?

ಆ) ಅಂತಹವರ ಆಸ್ತಿಗಳು ಅವರ ನಿಗದಿತ ಆದಾಯಕ್ಕೆ ಹೊಂದಾಣಿಕೆಯಾಗದಿರುವ ಪ್ರಕರಣಗಳ ಸಂಖ್ಯೆ ?

ಇ) ಅಂತಹ ಪ್ರಕರಣಗಳಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?